


ಎಡಿಟಿಂಗ್ ರೂಮಿನೊಳಕ್ಕೆ ಕೂತ ಇಂದುಮತಿಗೆ ವಿಠು ಕಕ್ಕನ ಮಗನ ನಿಶ್ಚಿತಾರ್ಥ ಎಂದು ತಿಳಿದು ಬಂದಾಗಿನಿಂದ ಯೋಚನೆ ಶುರುವಾಗಿತ್ತು. ರಜೆ ಕೇಳಿದ್ರೆ ಗುರುಗುಟ್ಟುವ ಮ್ಯಾನೇಜರಲ್ಲಿ ಹೇಗಪ್ಪಾ ರಜೆ ಕೇಳೋದು ಎಂದು. ಎಡಿಟಿಂಗ್ ಮಾಡುತ್ತಿದ್ದ ರೇಣು, ಇಂದುವಿನ ಗಮನ ಎಲ್ಲೋ ಇದೆ ಎಂದರಿತವ ಆಂಕರ್ ರೂಪಿಣಿಯ ಪ್ರೊಮೊ ಶಾಟುಗಳನ್ನು ನೋಡುತ್ತಿದ್ದ. 'ಓ, ಇವ್ನ ಆಟ ಶುರುವಾಯ್ತು' ಎಂದು, 'ರೇಣು, ಬೇಗನೇ ಎಡಿಟಿಂಗ್ ಮುಗಿಸಿ ಬಿಡಿ' ಇಂದುವಿನ ದನಿಗೆ ನಕ್ಕು ಮತ್ತೆ ಎಡಿಟಿಂಗ್ ಮುಂದುವರಿಸಿದಾಗ ಇಂದುವಿನ ಮೊಬೈಲು ರಿಂಗಣಿಸಿತು. ಆಯಿ... 'ಇಂದು, ಬರ್ತಿಲ್ವೇನೆ ರವಿಯ ನಿಶ್ಚಿತಾರ್ಥಕ್ಕೆ, ನೀನೂ ಬಾರದಿದ್ರೆ ಕಕ್ಕ ಬೇಜಾರು ಮಾಡ್ಕೊತಾರೆ'. 'ಅದು ಆಯಿ...' 'ಹಾಗಲ್ವೇ ಇಂದು ಮೊದಲೇ ಅವ್ರು ಆಗಾಗ ಹೇಳೋದಿದೆ, ನಾನು ಅಣ್ಣನ ಕುಟುಂಬ ಹಚ್ಚಿಕೊಂಡಷ್ಟು ಅವನೂ ಅವ್ನ ಮಕ್ಕಳು ನಮ್ಮನ್ನು ಹಚ್ಚಿಕೊಂಡಿಲ್ಲ ಅಂತ. ಆಮೇಲೆ ಅದೂ ನನ್ನ ಮೇಲೆ ಆಪಾದನೆ ಬರುತ್ತೆ ಇಂದು, ವೈನಿ ನೀನೂ ಒತ್ತಾಯ ಮಾಡಿಲ್ವೇನೋ ಅಂತ. ಮೊದಲಿಂದಲೂ ನನ್ಮೇಲೆ ನಿನ್ನ ಕಕ್ಕನ ಕಂಪ್ಲೇಂಟೇ ಇದೆ. ನಂಗೆ ತಾಯಿ ಮನೆ ಕಡೆಯವರತ್ರ ಇರೋ ಸೆಳೆತ ಗಂಡನ ಅಣ್ಣ ತಮ್ಮಂದಿರತ್ರ ಇಲ್ಲ ಅಂತ' ಒಂದೇ ಸಾರಿ ಎಲ್ಲವನ್ನೂ ಹೇಳಿ ಸಂತೃಪ್ತಿಗೊಂಡ ಆಯಿಯ ಮಾತು ಒಂಥರಾ ಭಾವನಾತ್ಮಕವಾಗಿ ಕಟ್ಟಿ ಹಾಕುವಂತೆ ಇದೆ ಅನಿಸಿತು ಇಂದುಮತಿಗೆ. ಆಯಿಗೆ ತಾನು ನಿಶ್ಚಿತಾರ್ಥಕ್ಕೆ ಹೋಗೋದಕ್ಕಿಂತಲೂ ಅವಳು ಮುಜುಗರದಿಂದ ತಪ್ಪಿಸಿಕೊಳ್ಳೋ ಯೋಚನೆಯೇ ಬಲವಾಗಿದೆ ಎನಿಸಿದರೂ, 'ಆಯಿ ಬರಬಾರದು ಅಂತಲ್ಲ. ಹೊರಟರೆ ಎರಡು ದಿನಗಳ ರಜೆ ಗೋವಿಂದಾ... ಮೇಘನಿಗೂ ಕ್ಲಾಸು ತಪ್ಪಿಸೋ ಹಾಗಿಲ್ಲ. ಈ ಸಾರಿ ಟೆಂಶ್ ಅಲ್ವ. ಇರಲಿ ನೋಡ್ತಿನಿ ಆಯಿ' ಎಂದು ಸಮಾಧಾನಿಸಿ ಫೋನ್ ಇಟ್ಟಾಗ ತಲೆ ತುಂಬ ಹತ್ತಾರು ಯೋಚನೆಗಳು. ಮತ್ತೆ ರೇಣುವಿಗೆ ಆಗ್ರಹ, ಪದೇ ಪದೇ ರೂಪಿಣಿಯ ರಶಸ್‌ಗಳನ್ನು ನೋಡುತ್ತಿದ್ದ ರೀತಿಗೆ ಮನದಲ್ಲೇ ನಕ್ಕರೂ, 'ರೇಏಏಣು...' ಎಂದಾಗ, 'ಓಕೆ, ಮೇಡಂ. ನೀವು ಫೋನಲ್ಲಿದೀರಲ್ವಾ ಹಾಗೇ ಸುಮ್ನೆ...' ಎಂದು ಎಡಿಟಿಂಗ್ ಮುಂದುವರೆಸಿದ. ಕಕ್ಕನೂ ಫೋನ್ ಮಾಡಿ, 'ಇಂದು, ಇದು ಮನೆ ಫಂಕ್ಷನ್. ನೀನೇ ರವಿಗೆ ಅಕ್ಕ. ನೆನಪಿರಲಿ, ರಜೆ ಇಲ್ಲ ಅಂತೆಲ್ಲ ತಪ್ಪಿಸಬೇಡ. ಎಲ್ರೂ ಬಂದು ಸುಧಾರಿಕೆ ಮಾಡಿಕೊಡಿ' ಎಂದ ಮಾತು ಆಗ್ರಹದಂತಿತ್ತು.

ಬಸ್ಸಿನಲ್ಲಿ ಕೂತಾಗ ರೇಣು ರೂಪಿಣಿಯ ರಶಸ್‌ಗಳನ್ನು ಹಿಂದೆಮುಂದೆ ತಿರುಗಿಸುತ್ತಾ ನೋಡುವಂತೆಯೇ ಇಂದುವಿನ ಮನದಲ್ಲಿ ಊರಿನ, ಬಾಲ್ಯದ ರಶಸ್‌ಗಳು... ನದೀತೀರದ ಆಟ,

